# ಗಾಂಧೀಜಿ ದೃಷ್ಟಿಯಲ್ಲಿ ಸತ್ಯ

ಡಾ. ಎಚ್. ರಾಮಚಂದ್ರ ಸ್ವಾಮಿ

**ಸತ್ಯವನ್ನು ದೇವರೊಂದಿಗೆ ಸಮೀಕರಿಸುವುದರ ಮೂಲಕ ದೇವರು ನಮಗೆ ಅತ್ಯಂತ ಸಮೀಪವರ್ತಿಯಾಗುವಂತೆ ಮಾಡಿರುವರು ಮಹಾತ್ಮಾ ಗಾಂಧೀಜಿಯವರು. ಅವರ ಸತ್ಯದ ಕಲ್ಪನೆಯ ಒಂದು ವಿಶ್ಲೇಷಣಾತ್ಮಕ ಲೇಖನವಿದು. ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾಗಿರುವ ಶ್ರೀ ರಾಮಚಂದ್ರಸ್ವಾಮಿಯವರು ಬ್ರಿಟಿಷ್ ಇಕಾಲಾಜಿಕಲ್ ಸೊಸೈಟಿಯ ಗೌರವ ಸದಸ್ಯರಾಗಿರುವರು.**

**ಗಾಂಧೀಜಿಯ** ಇಡೀ ಜೀವನ ತತ್ತ್ವದ ಸಾರಾಂಶವನ್ನು "ಸತ್ಯ" ಎಂಬ ಒಂದೇ ಒಂದು ಪದದಲ್ಲಿ ಸಂಗ್ರಹಿಸಿಬಿಡಬಹುದು. ಅವರು ಯಾವ ಯಾವುದನ್ನು ನೆಮ್ಮಿ ನಡೆದರೊ, ಯಾವ ಯಾವುದನ್ನು ನಂಬಿ ಅನುಷ್ಠಾನಕ್ಕೆ ತಂದರೊ, ಯಾವುದನ್ನು ಸಮರ್ಥಿಸಿ ಬೇರೆಯವರಿಗೂ ಬೋಧಿಸಿದರೊ, ಅವೆಲ್ಲಕ್ಕೂ ಮೂಲ ಆಧಾರವೆ ಈ "ಸತ್ಯ."

## ಸತ್ಯ ಮತ್ತು ಅಹಿಂಸೆ

"ಸತ್ಯದ ಆದರ್ಶ ಅಹಿಂಸೆಗಿಂತ ಚೆನ್ನಾಗಿ ನನಗೆ ಅರ್ಥವಾಗಿದೆ ಎಂದುಕೊಂಡಿದ್ದೇನೆ. ಒಂದು ವೇಳೆ ಸತ್ಯದ ಮೇಲಿನ ನನ್ನ ಹಿಡಿತವೇನಾದರೂ ತಪ್ಪಿಹೋದರೆ, 'ಅಹಿಂಸೆ'ಯ ಸಮಸ್ಯೆಯನ್ನು ನಾನು ಬಿಡಿಸಲಾರೆ..." ಎನ್ನುತ್ತಾರೆ ಗಾಂಧೀಜಿ. (*The Gandhi Reader*, Ed. H.A. Jack)

ಸತ್ಯ ಮತ್ತು ಅಹಿಂಸೆಗಳಿಗಿರುವ ಅವಿನಾಭಾವ ಸಂಬಂಧವನ್ನು ಕುರಿತು ಅವರು ಹೇಳುತ್ತಾರೆ: "ಅಹಿಂಸೆ ಮತ್ತು ಸತ್ಯ ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿವೆಯೆಂದರೆ ಅವುಗಳನ್ನು ಬೇರ್ಪಡಿಸಿ ಪರಿಗಣಿಸುವುದು ನನ್ನ ಮಟ್ಟಿಗೆ ಅಸಾಧ್ಯವೆನಿಸುತ್ತದೆ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು—ಅಲ್ಲ, ಮುದ್ರಿತವಾಗದಿರುವ ನಾಣ್ಯದ ಮುಖಗಳು; ಎರಡೂ ಕಡೆ ಸಮವಾಗಿಯೇ ನುಣ್ಣಗಿರುವ ಮುಖಗಳಲ್ಲಿ ಯಾವುದು ಯಾವುದೆಂದು ಹೇಗೆ ಹೇಳಲಾದೀತು? ಹೇಗಾದರಾಗಲಿ, ಅಹಿಂಸೆಯೇ ಸತ್ಯದ ಮಾರ್ಗ; ಹೋಗಿ ಸೇರಲಿರುವ ಗುರಿ ಸತ್ಯ; ಮಾರ್ಗವನ್ನು ಕ್ರಮಿಸುವುದು ನಮ್ಮ ಕೈಯಲ್ಲೇ ಇದೆ. ಆದ್ದರಿಂದ ಅಹಿಂಸೆ ನಮ್ಮ ಪರಮ ಕರ್ತವ್ಯ." (*All Men are Brothers*, UNESCO,1958)

ಅಹಿಂಸೆಯೇ ಸತ್ಯಕ್ಕಾಗಿ ಕ್ರಮಿಸಬೇಕಾದ ಮಾರ್ಗ ಏಕಾಗಬೇಕು? ಹಿಂಸಾ ಮಾರ್ಗದಿಂದ ಸತ್ಯವು ಸಿಕ್ಕಲಾರದೆ? ಗಾಂಧೀಜಿ ಹೇಳಿದ್ದಾರೆಂಬುದಕ್ಕಾಗಿ ಅಹಿಂಸೆಯನ್ನು ಒಪ್ಪಿಕೊಳ್ಳಬೇಕೆ?


ಸತ್ಯವು ಹಣೆಪಟ್ಟಿಯನ್ನು ಹಚ್ಚಿಕೊಂಡು ನಮ್ಮ ಮುಂದೆ ಬಂದೇನೂ ನಿಲ್ಲುವುದಿಲ್ಲ. ನಮ್ಮ ಜೀವನದ ಪ್ರತಿ ಕ್ಷಣದ ಅನುಭವದಂತೆ ಸುಳ್ಳುಗಳೂ ಮೋಸಗಳೂ ಸಾವಿರಾರು ಸಂಖ್ಯೆಯಲ್ಲಿ ನಮ್ಮ ನಂಬಿಕೆಯನ್ನೂ, ನೆಮ್ಮಿಕೆಯನ್ನೂ ಲಪಟಾಯಿಸುತ್ತಲೇ ಇರುತ್ತವೆ. ನಾವು ಮೋಸಹೋದದ್ದೂ ಸತ್ಯವಲ್ಲದ್ದನ್ನು ಸತ್ಯವೆಂದುಕೊಂಡದ್ದೂ ನಮಗೆ ತಿಳಿಯುವ ಹೊತ್ತಿಗೆ ತೀರಾ ತಡವಾಗಿ ಹೋಗಿರುತ್ತದೆ. ಗಾಳಿ ಬಂದಂತೆ ತೂರಿಕೊಳ್ಳುವ ಸಾಮಾನ್ಯನಿಗಿಂತಲೂ—ಸತ್ಯಾನ್ವೇಷಣೆಯ ಹಾದಿಯಲ್ಲಿ ಸಾಗಬಯಸುವ ಸಾಧಕನಿಗಂತೂ ಇಂತಹ ಭ್ರಮೆ, ಮೋಸ ಇತ್ಯಾದಿಗಳು ತೀರಾ ಹೆಚ್ಚು. ಎಂದ ಮಾತ್ರಕ್ಕೆ ಯಾವುದನ್ನೂ ನಂಬದೆ ಇದ್ದಲ್ಲಿಯೆ ಇರಲಾಗುವುದೆ? ಯಾರು ಒಳ್ಳೆಯ ನಾಣ್ಯವೋ ಯಾರು ಖೋಟಾ ನಾಣ್ಯವೋ ಯಾರಿಗೆ ಗೊತ್ತು? ಮೋಸ ವಂಚನೆ ಸುಳ್ಳುಗಳು ಹೇಗೆ ಯಾವ ಕ್ಷಣದಲ್ಲಿ ಯಾರ ಮೂಲಕವಾದರೂ ಪ್ರತ್ಯಕ್ಷವಾಗಿಬಿಡಬಹುದೋ ಸತ್ಯವೂ ಹಾಗೆಯೇ ಪ್ರತ್ಯಕ್ಷವಾಗಿಬಿಡಬಹುದಲ್ಲವೆ? ಅಲ್ಲದೆ ಇಂದು ಸಮಸ್ತ ಪಾಪಗಳಿಂದ ಪೂರಿತನಾದವನು ನಾಳೆ ಶುದ್ಧಾಂತಃಕರಣನಾಗಿಬಿಟ್ಟಿರಬಹುದು! ಅಲ್ಲದಿದ್ದರೂ ನಮ್ಮ ಮುಂದೆ ಸತ್ಯವನ್ನೇ ನುಡಿಯುತ್ತಿರಬಹುದು.

ಆದ್ದರಿಂದ ಸತ್ಯ ಯಾವಾಗ ಎಲ್ಲಿ ಯಾರ ಮೂಲಕ ನಮಗೆ ದರ್ಶನ ಕೊಡುವುದೋ ಹೇಳಲಾಗದು. ಆದ್ದರಿಂದ ಸತ್ಯಾನ್ವೇಷಕನು ಯಾರನ್ನೂ ದ್ವೇಷಿಸುವಂತಿಲ್ಲ, ಯಾರನ್ನೂ ಪೂರ್ವಾಗ್ರಹ ದೃಷ್ಟಿಯಿಂದ ನೋಡುವಂತಿಲ್ಲ, ಯಾರನ್ನೂ ಸುಳ್ಳುಗಾರ, ವಂಚಕ ಎಂದು ತೀರ್ಮಾನಿಸುವಂತಿಲ್ಲ. ಎಂದಮೇಲೆ ನಮ್ಮ ಜೀವನದಲ್ಲಿ ಹಿಂಸೆಗೆ ಸ್ಥಾನವೆಲ್ಲಿದೆ? ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಜೀವಿಯೂ ನಮಗೆ ಸತ್ಯದರ್ಶನ ಮಾಡಿಸುವ ಸಂಭಾವ್ಯತೆ ಇದೆ. ಇದು ಮನದಟ್ಟಾದರೆ, ಸಹನೆ ಗೌರವಗಳಲ್ಲದೆ, ಜೀವಕಾರುಣ್ಯ ಮಾತ್ರವಲ್ಲದೆ, ಅಹೈತುಕ ಪ್ರೇಮ ಪ್ರತಿ ಜೀವಿಯ ಬಗ್ಗೆಯೂ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಯಾರೂ ಸತ್ಯದಿಂದ (ಅರ್ಥಾತ್ ದೇವರಿಂದ) ಹೊರತಾದವರು ಎನ್ನಿಸುವುದಿಲ್ಲ. ಗಾಂಧೀಜಿಯ ಅಹಿಂಸೆ ಕೇವಲ ಹಿಂಸೆಯಿಂದ ಹಿಮ್ಮೆಟ್ಟುವ ಋಣಾತ್ಮಕ ಭಾವನೆಯಲ್ಲ, ಹೇಡಿತನವಲ್ಲ; ಬದಲಾಗಿ ಅದು ವಿಧಾಯಕವಾದ ಪ್ರೇಮ, ಕಾರುಣ್ಯ, ಅನುಕಂಪ, ಸ್ವೀಕಾರ. ಇತರರ ಮೇಲಣ ಪ್ರೇಮ ಗೌರವಗಳು ಇದ್ದ ಮಾತ್ರಕ್ಕೆ ಅವರ (ಅಸತ್ಯದ ತಳಹದಿಯ ಮೇಲೆ ಕಟ್ಟಿಕೊಂಡಿರಬಹುದಾದ) ಅಭಿಪ್ರಾಯಗಳನ್ನೋ ವ್ಯವಸ್ಥೆ-ಸಂಸ್ಥೆಗಳನ್ನೋ ಒಪ್ಪಬೇಕೆಂದರ್ಥವಲ್ಲ. ಗಾಂಧೀಜಿ ಹೇಳುವಂತೆ "ವ್ಯವಸ್ಥೆಯೊಂದನ್ನು ಎದುರಿಸಿ ಹೋರಾಡುವುದರಲ್ಲಿ ತಪ್ಪೇನಿಲ್ಲ; ಆದರೆ ಆ ಕಾರಣಕ್ಕೆ ವ್ಯವಸ್ಥೆಯ ಜನಕನನ್ನು ಎದುರಿಸಿ ಹೋರಾಡಿದರೆ ಅದು ತನ್ನ ಮೇಲೆ ತಾನೇ ಹೋರಾಟ ಸಾರಿದಂತೆ." (*All Men are Brothers*)

## ಸತ್ಯಾಗ್ರಹ

ರಾಜಕೀಯ, ಸಾಮಾಜಿಕ ವ್ಯವಸ್ಥೆಗಳನ್ನು ಬದಲಾಯಿಸುವುದಕ್ಕೆ ಗಾಂಧೀಜಿ ಇಟ್ಟುಕೊಂಡಿದ್ದ "ಸತ್ಯಾಗ್ರಹ"ವೆಂಬ ದಿವ್ಯಾಸ್ತ್ರದ

ಮೂಲಭಾವನೆ ಇದೇ. ಅವರು ವ್ಯವಸ್ಥೆಯನ್ನೆದುರಿಸಿ ಹೋರಾಡಿದರೇ ವಿನಾ ಅದರ ಅಮಲುದಾರ ಅಧಿಕಾರಸ್ಥರನ್ನಲ್ಲ, ಅದಕ್ಕೆ ಕಾರಣರಾದ ಮೂಲಪುರುಷರನ್ನೂ ಅಲ್ಲ. ಗಾಂಧೀಜಿಯ ಸತ್ಯಾಗ್ರಹವೆಂದರೆ ತಮ್ಮ ಪ್ರೇಮದ ಶಕ್ತಿಯಿಂದ, ಸ್ವಾರ್ಥತ್ಯಾಗದ ಶಕ್ತಿಯಿಂದ ತಾವು ಆಗ್ರಹಿಸುತ್ತಿರುವ ತಮ್ಮ ಸತ್ಯದ ಮಾರ್ಗಕ್ಕೆ ತಮ್ಮ ವಿರೋಧಿಗಳ ಮನವೊಲಿಸಿ ಕರೆತರುವ ಪ್ರಯತ್ನವಾಗಿತ್ತೇ ಹೊರತು ಯಾರನ್ನೂ ವ್ಯಕ್ತಿಶಃ ವಿರೋಧಿಸುವುದಾಗಿರಲಿಲ್ಲ. ಅವರೆನ್ನುತ್ತಾರೆ (*All Men are Brothers*):



"ಸತ್ಯಾಗ್ರಹವು ವಿರೋಧಿಗಳ ಮೇಲೆ ಯಾವುದೇ ರೀತಿಯ ಹಿಂಸಾತ್ಮಕ ಒತ್ತಡವನ್ನು ತರುವುದು ಅಲ್ಲವೆಂದು ನಾನು ಪ್ರಾರಂಭದಲ್ಲಿಯೇ ಕಂಡುಕೊಂಡೆ; ಬದಲಾಗಿ ಅವರನ್ನು ತಾಳ್ಮೆ ಸಹಾನುಭೂತಿಗಳಿಂದ ತಪ್ಪುದಾರಿಯಿಂದ ಹೊರ ತರಬೇಕು. ನಮಗೆ ಒಪ್ಪಾಗಿ ಕಾಣುವುದು ಅವರಿಗೆ ತಪ್ಪಾಗಿ ಕಾಣುವುದರಲ್ಲಿ ಅಸಹಜವೇನಿಲ್ಲ; ಇಲ್ಲಿ ತಾಳ್ಮೆ ಸ್ಥಿರತೆಗಳು ಅಗತ್ಯ. ತಾಳ್ಮೆ ಎಂದರೆ (ವಿರೋಧಿಗಳಿಂದಾದ) ನೋವನ್ನು ಸಹಿಸುವುದು. ಹೀಗೆ ಸತ್ಯಾಗ್ರಹವೆಂದರೆ ಹಿಂಸೆಯಿಂದಾದ ನೋವನ್ನು ತಾನು ಸಹಿಸುವುದೇ ಹೊರತು ಇತರರನ್ನು ಹಿಂಸಿಸುವುದಲ್ಲ."

## ಸತ್ಯ ಮತ್ತು ಧರ್ಮ

ಗಾಂಧೀಜಿ ಪಾಲಿಗೆ ಸತ್ಯವೇ ದೇವರು. ಈ ಕಲ್ಪನೆಯು "ಧರ್ಮ"ಕ್ಕೆ ಹೇಗೆ ಸಂಗತವಾಗುತ್ತದೆ ಎಂಬುದನ್ನು ನೋಡೋಣ. ಮೂಢನಂಬಿಕೆಗಳು, ಲೋಕಾಚಾರ, ಕಂದಾಚಾರಗಳ ಕಂತೆಯಾಗಿರುವ ಧರ್ಮವನ್ನು ರಚನಾತ್ಮಕ ತಳಹದಿಯ ಮೇಲೆ ವೈಜ್ಞಾನಿಕವಾಗಿ ರೂಪಿಸಬೇಕು. ಗಾಂಧೀಜಿಯ ಸತ್ಯವೇ ದೇವರೆಂಬ ಕಲ್ಪನೆಯು ಇಂಥ ತಳಹದಿಯನ್ನು ಒದಗಿಸಬಲ್ಲುದು. ಈ ಕಲ್ಪನೆ ಬುದ್ಧಿಗೆ ಎಟಕುವಂಥಾದ್ದು. ದೇವರನ್ನು ಆಶ್ರಯಿಸಬಯಸುವ ಭಕ್ತನಿಗೆ ತಾನು ಅರಸುತ್ತಿರುವುದೇನೆಂದು ತಿಳಿದಿರಬೇಕಲ್ಲವೆ? ಅದ್ಭುತ ಪವಾಡವೆಂದೋ ಪ್ರಶ್ನಾತೀತ ವ್ಯಕ್ತಿಯೊಬ್ಬನ ಬೋಧನೆಯೆಂದೋ ದತ್ತವಾದ ದೇವರು, ಧರ್ಮಗಳು ಅಂಧಶ್ರದ್ಧೆಯನ್ನು ಬೆಳೆಸುತ್ತವೆ. ಇದು ಅಮಾಯಕನ ನಂಬಿಕೆಯ ಶೋಷಣೆ. ಸತ್ಯವೇ ದೇವರೆಂಬ ಗಾಂಧೀಜಿಯ ಕಲ್ಪನೆ ಇಂಥ ಶೋಷಣೆಗೆ ಕಾರಣವಾಗುವುದಿಲ್ಲ. ಕೈಗೆಟಕುವಂತಿರುವುದಾದರೂ ಇದು ದೇವರ ಅತೀತತತ್ವವನ್ನಾಗಲಿ ಅನನ್ಯತೆಯ ಅದ್ಭುತವನ್ನಾಗಲಿ ಹಾಳುಮಾಡುವುದಿಲ್ಲ. ಏಕೆಂದರೆ ಸತ್ಯವು ನಾವು ತಿಳಿಯಲಿಚ್ಛಿಸಲಿ ಬಿಡಲಿ ನಮ್ಮಲ್ಲಿ ಓತಪ್ರೋತವಾಗಿದೆ; ಅಲ್ಲದೆ ಅದು ಯಾರೊಬ್ಬರಿಂದಲೂ ಅನ್ವೇಷಿಸಿ ಮುಗಿಸಲಾರದಷ್ಟು ದೊಡ್ಡದು—ನಿರಂತರ ಧಾರಾವಾಹಿ. ಗುರಿಯ ಹತ್ತಿರ ಹತ್ತಿರ ಹೋಗುವುದು ಸಾಧ್ಯವೇ ಹೊರತು ಗುರಿ ತಲುಪಿಬಿಟ್ಟೆವು ಎಂಬುದಿಲ್ಲ. ತಿಳಿದಷ್ಟೂ ಸತ್ಯವು ಇನ್ನೂ ತಿಳಿಯಲಿಕ್ಕೆ ಇದೆ ಎಂಬುದು ಗೊತ್ತಾಗುತ್ತದೆಯಾಗಿ ಒಟ್ಟಾರೆ ಸತ್ಯವು ಅತೀತವಾಗಿಯೇ ಉಳಿಯುತ್ತದೆ—ಉಪನಿಷತ್ತುಗಳ ಬ್ರಹ್ಮನಂತೆ.

ಎರಡನೆಯದಾಗಿ, ಸತ್ಯವು ದೇವರ ಅಲ್ಲಗಳೆಯಲಾರದಂಥ ಗುಣವಿವರಣೆ. ಹೊಸಹೊಸದಾಗಿ ಕಂಡುಹಿಡಿಯಬಹುದಾದ ಎಲ್ಲ ಸಂಗತಿಗಳೂ ಸತ್ಯವೆಂದಾದೊಡನೆ ದೇವರ ಗುಣವಿವರಣೆಯಾಗುತ್ತ ಹೋಗುವುದರಿಂದ ದೇವರು ಪಳೆಯುಳಿಕೆಯಾಗಿಬಿಡುವ ಅಪಾಯವಿಲ್ಲ. ಆ್ಯಡಂ ಈವರನ್ನು ಸೃಷ್ಟಿಸಿದ ದೇವರ ಜಾಗದಲ್ಲಿ ಮಾನವನೇ ಕಂಡುಕೊಂಡ ಸತ್ಯದ ದೇವರು ಹೆಚ್ಚು ಸಂಗತವಾಗುತ್ತಾನೆ. ವ್ಯತ್ಯಾಸವಿಷ್ಟೆ: ಸಾಂಪ್ರದಾಯಿಕ ಪೀಠಾಧಿಪತಿಗಳ ಬದಲು ಗುರುತ್ವ ವಿದ್ದವರು ಮಾತ್ರ ಗುರುಗಳೆನಿಸಿಕೊಳ್ಳುತ್ತಾರೆ. ಗಾಂಧೀಜಿ ರೋಮಾರೋಲಾಗೆ ಹೇಳಿದಂತೆ "ಸತ್ಯವೇ ದೇವರೆಂಬುದನ್ನು ನಾಸ್ತಿಕರೂ ಅಲ್ಲಗಳೆಯಲಾರರು. ಅವರ ಅನ್ವೇಷಣೆಯಲ್ಲಿ ಅವರು ದೇವರಿಲ್ಲವೆಂಬ ಸತ್ಯವನ್ನು ಕಂಡುಕೊಂಡಿದ್ದಾರೆ. ಅವರು ಅಲ್ಲಗಳೆಯುತ್ತಿರುವುದು ದೇವರೆಂಬ ಹೆಸರನ್ನು; ಸತ್ಯವನ್ನಲ್ಲ." (*The Gandhi Reader*, Ed.M.A. Jack)

ಈ ಧರ್ಮದಲ್ಲಿ ಅವರವರ ಭಾವದಂತೆ, ಯೋಗ್ಯತೆಯಂತೆ, ಸತ್ಯಾನ್ವೇಷಣೆಯ ಹಂತದಂತೆ ಅವರವರ ದೇವರಿರುವುದು ಸಹಜವಾಗುತ್ತದೆ. ಎಲ್ಲರೂ ಒಪ್ಪುವ ಒಂದು ರಾಮಮಂದಿರದ ನಿರ್ಮಾಣ ಅಸಾಧ್ಯ. ಗಾಂಧೀಜಿ ಹೇಳುತ್ತಾರೆ: "ಕಲ್ಪವೃಕ್ಷಕ್ಕೋ ಕಾಮಧೇನುವಿಗೋ ಹೋಲಿಸಬಹುದಾದ ಈ ಸತ್ಯವನ್ನು ಅನುಭೂತಿಯನ್ನಾಗಿಸುವುದು ಹೇಗೆ? ಏಕಾಗ್ರಮನಸ್ಸು ಅರ್ಪಣೆಗಳಿಂದ (ಅಭ್ಯಾಸ) ಹಾಗೂ ಇತರ ಎಲ್ಲ ಸಂಗತಿಗಳನ್ನೂ ಉದಾಸೀನ ಮಾಡುವುದರಿಂದ (ವೈರಾಗ್ಯ)....ಹೀಗಿದ್ದರೂ ಒಬ್ಬನಿಗೆ ಸತ್ಯವಾಗಿ ಕಂಡದ್ದು ಇನ್ನೊಬ್ಬನಿಗೆ ಅಸತ್ಯವಾಗಿಯೇ ಕಾಣಬಹುದು. ಪ್ರಾಮಾಣಿಕ ಪರಿಶ್ರಮದಿಂದ ಮುಂದುವರೆದರೆ ಕೊನೆಗೊಮ್ಮೆ ಎಲ್ಲ ಸತ್ಯಗಳೂ ಒಂದೇ ಮರದ ಎಲೆಗಳಂತೆ ಎಂಬುದು ಮನವರಿಕೆಯಾಗುವುದು..... ಆದ್ದರಿಂದ ಪ್ರತಿಯೊಬ್ಬ ಸಾಧಕನೂ ತನ್ನ ಮನಸ್ಸಿನ ಬೆಳಕಿನಲ್ಲಿಯೇ ಮುಂದುವರೆಯುವುದರಲ್ಲಿ ತಪ್ಪೇನಿಲ್ಲ. ಹಾಗೆ ಮುನ್ನಡೆಯುವಾಗ ಏನೇ ತಪ್ಪಾದರೂ ಅದನ್ನು ಮುಂಬರುವ ಸತ್ಯದ ಬೆಳಕಿನಲ್ಲಿ ಸರಿಪಡಿಸಿಕೊಳ್ಳಬಹುದು..." (*Selected Writings of Mahatma Gandhi*, Ed. Ronald Duncan).

## ಧರ್ಮ ವೈಯಕ್ತಿಕ

ಈ ಧೋರಣೆ ಧರ್ಮವನ್ನು ವೈಯಕ್ತಿಕವಾಗಿಸುವುದರಲ್ಲಿ ಸಂದೇಹವಿಲ್ಲ. ಹಿಂದೂಧರ್ಮದ ವೈಶಿಷ್ಟ್ಯವೇ ಇದು. ಗಾಂಧೀಜಿಯ ದೇವರು ವ್ಯಕ್ತಿರೂಪನಲ್ಲ ಎಂದಾಯಿತು. ಆದರೆ ಬಹುಜನರಿಗೆ ಸತ್ಯವೆಂಬ ಇಂಥ ಅಮೂರ್ತ ದೇವರನ್ನು ಗ್ರಹಿಸುವುದು ಕಷ್ಟವಲ್ಲವೆ? ಎಂಬ ಪ್ರಶ್ನೆ ಏಳುತ್ತದೆ. ಗಾಂಧೀಜಿಯ ತಾಳ್ಮೆಯನ್ನು ಇಲ್ಲಿ ನೋಡಬಹುದು. "ದೇವರ ಮೂರ್ತರೂಪ ಬೇಕೆನ್ನುವವರಿಗೆ ಅಂಥ ದೇವರು ಇರಲಿ. ಅವರಿಗೆ ಅದೇ ಸತ್ಯ." (*All Men are Brothers*) ನಮ್ಮ ನಮ್ಮ ಭಾವನೆಗಳ ಹಿನ್ನೆಲೆಯಲ್ಲಿರುವ ಸತ್ಯವೇ ದೇವರಲ್ಲದೆ ಭಾವನೆಗಳೂ ಕಲ್ಪನೆಗಳೂ ಅಲ್ಲ. ಪಗ್ಗವನ್ನು

ಹಾವೆಂದು ಕೊಂಡಿರುವವನಿಗೆ ಆ ಸರ್ಪಭಾವದ ಅನುಭೂತಿ ಇರುವವರೆಗೂ ಆ ಅನುಭೂತಿಯೇ ಸತ್ಯವೇ ಹೊರತು, ಅವನಿಗೆ ಆ ಕಾಲದ ಮಟ್ಟಿಗೆ ಅದರ ಹಗ್ಗತನದ ಕಗ್ಗಸತ್ಯವೇನೂ ಪ್ರಯೋಜನಕ್ಕೆ ಬರುವುದಿಲ್ಲ. ಎಂದ ಮಾತ್ರಕ್ಕೆ ಅವನು ಅದನ್ನು ಹಗ್ಗವೆಂದು ಮುಂದೆಂದೂ ಅರಿಯಲಾರನೆ?

ಈ ಧರ್ಮ, ಸತ್ಯವೇ ದೇವರೆಂಬ ಈ ಭಾವನೆ, ಪ್ರಚಾರಕ್ಕೆ ಹೊರಡುವುದಿಲ್ಲ. ಸತ್ಯವನ್ನು ಒಬ್ಬೊಬ್ಬನೂ ಅನ್ವೇಷಿಸಿ ಅನುಭವಿಸಿ ತಿಳಿದುಕೊಳ್ಳಬೇಕಾಗಿರುವಾಗ ಪ್ರಚಾರದ ಅಗತ್ಯವೆಲ್ಲಿದೆ, ಪ್ರಚಾರ ಮಾಡುವುದಕ್ಕೆ ಏನಿದೆ? ಜನಕ್ಕೆ ಧರ್ಮ ಒಂದೇ ಬಾಳಿನ ಬೆಳಕಾಗಿದ್ದಾಗ ಧರ್ಮ ಬೇಕಾದಷ್ಟನ್ನು ಹೇಳಿತು, ಬೇಡವಾದ್ದನ್ನೂ ಹೇಳಿತು, ಕೇಳದಿದ್ದರೂ ಹೇಳಿತು, ಹೇಳಿಕೆಗಳು ಪರಸ್ಪರ ವಿರೋಧಾಭಾಸಗಳಾಗಿದ್ದರೂ ಹೇಳಿತು. ಆದರೆ ಈಗಿನ ಜನರು ತಮ್ಮ ಸಮಸ್ಯೆಗಳಿಗೆ ಅನ್ವೇಷಿಸಿ ಪರಿಹಾರವನ್ನು ಕಂಡುಕೊಳ್ಳುವ ವಿಧಾನವನ್ನು ಕಲಿತಿದ್ದಾರೆ. ಆಸ್ಫೋಟಕವಾಗಿ ಬೆಳೆಯುತ್ತಿರುವ ವಿಜ್ಞಾನ, ತಾಂತ್ರಿಕತೆಗಳು ಸಾಂಪ್ರದಾಯಿಕ ಧರ್ಮಕ್ಕೆ ಸವಾಲಾಗಿ ನಿಂತಿವೆ. ಆದರೆ ದೈನಂದಿನ ಸಮಸ್ಯೆಗಳಿಗೆ ಪರಿಹಾರವನ್ನೊದಗಿಸುವುದರಲ್ಲಿ ಅವು ವಿಫಲವಾಗಿವೆ. ಈ ಹಿನ್ನೆಲೆಯಲ್ಲಿ ಸತ್ಯವೇ ದೇವರೆಂಬ ಗಾಂಧೀಜಿಯ ಧರ್ಮ ಹೆಚ್ಚು ಆದರಣೀಯ. ✻

ಐನ್‌ಸ್ಟೈನ್ ಅವರ ಕೊಠಡಿಯಲ್ಲಿ ಕೇವಲ ಮೂರು ವ್ಯಕ್ತಿಗಳ ಚಿತ್ರಪಟಗಳಿದ್ದುವೆಂಬುದನ್ನು ಅರಿಯಲು ಆಶ್ಚರ್ಯವಾಗುತ್ತದೆ. ಅವುಗಳೆಂದರೆ ಫ್ಯಾರಡೆ, ಮ್ಯಾಕ್ಸ್‌ವೆಲ್ ಹಾಗೂ ಗಾಂಧೀಜಿ. ಅವರು ಒಮ್ಮೆ ಹೇಳಿದರು : “ನಮ್ಮ ಕಾಲದ ಅತ್ಯಂತ ಸತ್ಯವಂತ ರಾಜಕೀಯ ವ್ಯಕ್ತಿ ಎಂದರೆ ಮಹಾತ್ಮಾ ಗಾಂಧಿ ಮಾತ್ರ. ಅವರು ನಿಜವಾಗಿ ನಮ್ಮ ಕಾಲದ ಗರಿಷ್ಠ ವ್ಯಕ್ತಿ.” ಗಾಂಧೀಜಿಯ ಹತ್ಯೆ ವಾರ್ತೆ ಕೇಳಿ ಹೇಳಿದರು, “ಇಂತಹ ಒಬ್ಬ ವ್ಯಕ್ತಿ ಎಂದಾದರೂ ಈ ನೆಲದ ಮೇಲೆ ಓಡಾಡಿದ್ದರು ಎಂದು ಮುಂದಿನ ಜನಾಂಗಕ್ಕೆ ಬಹುಶಃ ನಂಬುವುದಕ್ಕೆ ಅಸಾಧ್ಯವಾಗುತ್ತದೆ.”

# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವ

ಪ್ರೊ. ಎನ್. ಕೃಷ್ಣಸ್ವಾಮಿ

ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವದ ಕುರಿತ ಕಳೆದ ಸಂಚಿಕೆಯಲ್ಲಿನ ಲೇಖನದ ಮುಕ್ತಾಯ ಭಾಗ ಇದು. ಸತ್ಯದ ಆರಾಧಕರಾಗಿದ್ದ ಸ್ವಾಮಿಜೀಯವರಿಗೆ ವಿಜ್ಞಾನದ ನಿಕಟ ಪರಿಚಯವಿದ್ದದ್ದು ಮಾತ್ರವಲ್ಲದೆ ಅದರ ಇತಿ-ಮಿತಿಗಳ ಅರಿವಿತ್ತು ಎಂಬುದಾಗಿ ಪ್ರೊ.ಕೃಷ್ಣಸ್ವಾಮಿಯವರು ಈ ಲೇಖನದಲ್ಲಿ ತಿಳಿಸುತ್ತಾರೆ.

## ಜಗದೀಶ್ ಚಂದ್ರ ಬೋಸ್

ನಮ್ಮ ದೇಶದ ಅತಿ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರು ಡಾ.ಜೆ.ಸಿ.ಬೋಸ್. ಇವರನ್ನು ವಿವೇಕಾನಂದರು ಅಮೆರಿಕದಿಂದ ಹಿಂದಿರುಗಿದಾಗ ಭಾರತದಲ್ಲಿಯೇ ನೋಡಿದ್ದರು. ಆದರೆ ಅವರು ಎರಡನೆಯ ಸಲ ವಿದೇಶಯಾತ್ರೆ ಮಾಡಿ ಅಮೆರಿಕದಿಂದ ಹಿಂದಿರುಗುವಾಗ, ೧೯೦೦ ಸೆಪ್ಟೆಂಬರ್ ೩ರಿಂದ ೮ರವರೆಗೆ ಪ್ಯಾರಿಸ್ಸಿನಲ್ಲಿ ಜರುಗಿದ ಕಾಂಗ್ರೆಸ್ ಆಫ್ ದಿ ಹಿಸ್ಟರಿ ಆಫ್ ರಿಲಿಜನ್ಸ್ (ಧರ್ಮಗಳ ಚರಿತ್ರೆಯ ಮಹಾಸಭೆ)ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರಿಗೆ ಅನೇಕ ವಿದ್ವಾಂಸರ ನಿಕಟ ಪರಿಚಯ ಮಾಡಿಕೊಳ್ಳುವ ಅವಕಾಶ ಸಿಕ್ಕಿತು. ಇವರ ಪೈಕಿ ನಮ್ಮ ದೇಶದವರೇ ಆದ ಡಾ. ಜಗದೀಶ ಚಂದ್ರ ಬೋಸರೂ ಇದ್ದರು. ಇಂಗ್ಲಿಷಿನ *Life of Swami Vivekananda* (II.ಪು.538)ದಲ್ಲಿ ಇದರ ಉಲ್ಲೇಖ ಇದೆ:



ಜಗದೀಶ್ ಚಂದ್ರ ಬೋಸ್

“...... ಡಾ. ಜಗದೀಶ್ ಚಂದ್ರ ಬೋಸ್ ಅವರ ಸಸ್ಯಗಳ ಸಂವೇದನೆಯ ವಿಷಯದ ಗಮನಾರ್ಹ ಅನ್ವೇಷಣೆಗಳು ವೈಜ್ಞಾನಿಕ ಪ್ರಪಂಚವನ್ನು ವಿಸ್ಮಯಗೊಳಿಸಿವೆ. ಡಾ.ಬೋಸ್ ಅವರನ್ನು ಮಹಾಪ್ರದರ್ಶನದಲ್ಲಿನ ವಿಜ್ಞಾನಿಗಳ ಸಭೆಗೆ ಆಹ್ವಾನಿಸಲಾಗಿತ್ತು, ಮತ್ತು ಸ್ವಾಮೀಜಿ ಅವರನ್ನು ಹಲವು ಸಲ ಭೇಟಿ ಮಾಡಿದರು. ಅನೇಕ ಸಲ ಅವರು ತಮ್ಮೊಡನೆ ಇದ್ದವರಿಗೆ “ಬಂಗಾಲದ ಹೆಮ್ಮೆ ಮತ್ತು ಉಜ್ವಲ ಯಶಸ್ಸು” ಎನಿಸಿರುವ ಈ ಭಾರತೀಯ ವಿಜ್ಞಾನಿಯ ಮಹಿಮೆಯನ್ನು ವಿವರಿಸುತ್ತಿದ್ದರು. ಒಂದು ಸಂದರ್ಭದಲ್ಲಿ ಹಲವು ವಿಖ್ಯಾತ ವ್ಯಕ್ತಿಗಳ ಗುಂಪಿನಲ್ಲಿ ಒಬ್ಬ ವಿದ್ಯಾರ್ಥಿನಿ ಖ್ಯಾತ ಬ್ರಿಟಿಷ್ ವಿಜ್ಞಾನಿಯಾದ ತನ್ನ ಪ್ರೊಫೆಸರರು, ಕುಬ್ಜ ಕಮಲ ಪುಷ್ಪದ ಬೆಳವಣಿಗೆಯನ್ನು ಕುರಿತು ಪ್ರಯೋಗಗಳನ್ನು ನಡೆಸುತ್ತಿರುವರೆಂದು ಕೊಚ್ಚಿಕೊಂಡಳು. ಆಗ ಸ್ವಾಮೀಜಿ ಹಾಸ್ಯದೊಡನೆ ಉತ್ತರಿಸಿದರು: “ಅರೆ! ಅದೇನು ಮಹಾ! ಬೋಸರು ಆ ಕಮಲದ ಗಿಡ ಬೆಳೆದಿರುವ ಪುಷ್ಪ ಕುಂಡವೇ ಪ್ರತಿಕ್ರಿಯಿಸುವಂತೆ ಮಾಡಬಲ್ಲರು!”

ಹೀಗೆ ಸ್ವಾಮೀಜಿಯವರಿಗೆ ಡಾ. ಬೋಸರ ಮೇಲೆ ಬಹಳ ಅಭಿಮಾನವಿದ್ದಿತು. ಅವರ ಶಿಷ್ಯೆ